ಕರ್ನಾಟಕ ಲೋಕಾಯುಕ್ತ

ನಂ:ಕಂ.ಲೋಕ್.ಬಿಸಿಡಿ 2514/2018

ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:09/07/2019

ನೋಟೀಸು

ವಿಷಯ: ಹೆಚ್.ಎಸ್.ದೊರೈಸ್ವಾಮಿ ಎಂಬುವವರು ನಮ್ಮ ಸಂಸ್ಥೆಯಲ್ಲಿ ನೀಡಿರುವ ದೂರಿನ ಕುರಿತು.

--

ಮೇಲ್ಕಂಡ ವಿಷಯಕ್ಕೆ ಸಂಬಂದಪಟ್ಟಂತೆ ತಮಗೆ ಈ ಮೂಲಕ ಗೌರವಾನ್ವಿತ ಲೋಕಾಯುಕ್ತರವರ ಆದೇಶದಂತೆ ತಮಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ, ಗೌರವಾನ್ವಿತ ಲೋಕಾಯುಕ್ತರವರು **ಅಲ್ಲಾಳಸಂದ್ರ ಕೆರೆಗೆ** ಸಂಬಂದಪಟ್ಟಂತೆ ದಿನಾಂಕ:03-07-2019 ರಂದು ಹೊರಡಿಸಿರುವ ಆದೇಶವನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದ್ದು, ಆದೇಶದ ನಿರ್ದೇಶನದಂತೆ ಕ್ರಮ ವಹಿಸಿ ವರದಿಯನ್ನು ದಿನಾಂಕ:6.11.2019 ರೊಳಗಾಗಿ ಸಲ್ಲಿಸತಕ್ಕದ್ದು.

ಮುಂದುವರೆದು ಸದರಿ ಪ್ರಕರಣವನ್ನು ದಿನಾಂಕ:06-11-2019 ರಂದು 3-00 ಗಂಟೆಗೆ ಖುದ್ದು ಗೌರವಾನ್ವಿತ ಲೋಕಾಯುಕ್ತರವರ ಮುಂದೆ ನಿಗಧಿಪಡಿಸಲಾಗಿದೆ.

ಗೌರವಾನ್ವಿತ ಲೋಕಾಯುಕ್ತರವರ ಆದೇಶದನ್ವಯ

10/7

ಅಪರ ನಿಭಂದಕರು ವಿಚಾರಣೆಗಳು-1
ಕರ್ನಾಟಕ ಲೋಕಾಯುಕ್ತ,ಬೆಂಗಳೂರು

1) **Sri.Suresh, C.E.O., Namma Bangalore foundation, 2nd floor, No54, Rockline centre, Richmond Road, Bangalore.**

2) **Sri.Bhat, Legal Officer, Karnataka State Pollution Control Board, Church street Bangalore.**

**3) The Chairman, B W S S B, Cauvery Bhavan, Bangalore**

**4) The Commissioner, BBMP, Bangalore**

**5) The Tahsildar, Bangalore North Taluk, Bangalore.**

**KARNATAKA LOKAYUKTA, BENGALURU**

No:Compt/LOK/BCD-2514/2018 Date : 03-07-2019

**ORDER**

No one is present on behalf of the complainant.

2. No one is present on behalf of the Bruhath Bengaluru Mahanagara Palike, Bengaluru.

3. No one is present on behalf of 3rd respondent BWSSB.

4. On behalf of Karnataka State Pollution Control Board, Bengaluru, Sri Bhat, Law Officer, Sri D.R. Kumaraswamy, Senior Environmental Officer and Dr. Niranjan are present. They have submitted a status report dated 02-07-2019 along with certain photographs setting out the work that is being carried out. It is useful to extract the said status report, which reads as hereunder:

"ವಿಷಯ: ಶ್ರೀ. ಹೆಚ್. ಎಸ್. ದೊರೆಸ್ವಾಮಿಯವರು ನೀಡಿರುವ
ದೂರಿನ ಕುರಿತು.

ಉಲ್ಲೇಖ: 1. ಕರ್ನಾಟಕ ಲೋಕಾಯುಕ್ತ ಪತ್ರ ಸಂಖ್ಯೆ: ಲೋಕ್.
ಬಿಸಿಡಿ 2514/2018 ದಿನಾಂಕ. 24.09.2018

*****

ಗೌರವಾನ್ವಿತ ಲೋಕಾಯುಕ್ತರು ದಿನಾಂಕ: 11.09.2018ರಂದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಎದುರುದಾರ-2) ರವರಿಗೆ ನೀಡಿದ ನಿರ್ದೇಶನದಂತೆ

ಮಂಡಳಿಯ ಅಧಿಕಾರಿಗಳು ಸಂಬಂಧಪಟ್ಟ ಕೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಪರಿಶೀಲಿಸಿ ವರದಿಯನ್ನು ಮಾನ್ಯರವರಲ್ಲಿ ಸಲ್ಲಿಸಲಾಗುತ್ತಿದೆ.

ಪ್ರಾದೇಶಿಕ ಕಛೇರಿ ಯಲಹಂಕ (ಬ್ಯಾಟರಾಯನಪುರ):

1. **ಅಳ್ಳಾಲಸಂದ್ರ ಕೆರೆ:** ಈ ಕೆರೆಯು ಅಳ್ಳಾಲಸಂದ್ರ ಹಳ್ಳಿಯ ಯಲಹಂಕದ ಪಕ್ಕದಲ್ಲಿ ಸುಮಾರು 45 ಎಕರೆಗಳಷ್ಟು ವಿಸ್ತಾರವಿದೆ ಎಂದು ತಿಳಿದುಬಂದಿದೆ.

**ಕೆರೆಯನ್ನು ದಿನಾಂಕ 17.06.2019 ರಂದು ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತದೆ.**

- ಈ ಕೆರೆಯು ಬಿಬಿಎಂಪಿ ವ್ಯಾಪ್ತಿಯಲ್ಲಿರುತ್ತದೆ.
- ಕೆರೆಯ ಸುತ್ತ ಬೇಲಿಯನ್ನು ಹಾಕಿರುತ್ತಾರೆ ಹಾಗು ಪಾದಚಾರಿಗಳಿಗೆ ವಾಯುವಿಹಾರಕ್ಕಾಗಿ ಕಾಲುದಾರಿಯನ್ನು ನಿರ್ಮಿಸಿರುತ್ತಾರೆ.
- ಬಿ.ಡಬ್ಲ್ಯೂ.ಎಸ್.ಎಸ್.ಬಿ ಯವರು ಕೆರೆಯ ಮೇಲ್ಭಾಗದಲ್ಲಿ 10 ಎಮ್.ಎಲ್.ಡಿ ರೊಚ್ಚು ನೀರಿನ ಸಂಸ್ಕರಣಾ ಘಟಕವನ್ನು ಸ್ಥಾಪಿಸಿದ್ದಾರೆ. ಹಾಗೂ ಸುಮಾರು 7 ಎಮ್.ಎಲ್.ಡಿಯಷ್ಟು ರೊಚ್ಚುನೀರನ್ನು ಸಂಸ್ಕರಿಸುತ್ತಿದ್ದಾರೆ.
- ಸುಮಾರು 3 ಎಮ್.ಎಲ್.ಡಿ ಯಷ್ಟು ಸಂಸ್ಕರಿಸಿದ ನೀರನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬಿ.ಇ.ಎಲ್, ರೈಲ್ವೇ ಕಾರ್ಖಾನೆ ಮತ್ತು ಐಟಿಸಿ ಕಾರ್ಖಾನೆಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಉಳಿದ ಭಾಗವನ್ನು ಕೆರೆಗೆ ಬಿಡುತ್ತಿದ್ದಾರೆ.
- ಕೆರೆಯ ಪಶ್ಚಿಮ ಭಾಗದಲ್ಲಿ ಚಿಕ್ಕಬೊಮ್ಮಸಂದ್ರ ಹಳ್ಳಿಯಿಂದ ರೊಚ್ಚುನೀರು ಕೆರೆ ಸೇರುತಿತ್ತು. ಈಗ ಯಾವುದೇ ರೊಚ್ಚುನೀರು ಈ ಭಾಗದಿಂದ ಕೆರೆಯನ್ನು ಸೇರುತ್ತಿರುವುದಿಲ್ಲ.
- ದಿನಾಂಕ 24.04.2019 ರಂದು ಸಂಗ್ರಹಿಸಿದ ಕೆರೆಯ ನೀರಿನ ಗುಣಮಟ್ಟವು "ಇ" ವರ್ಗಕ್ಕೆ ಸೇರಿರುತ್ತದೆ. ಈ ನೀರನ್ನು ಕೃಷಿಗೆ, ಕೈಗಾರಿಕೆಗಳಲ್ಲಿ ತಂಪುಗೊಳಿಸಲು ಮತ್ತು ನಿಯಮಿತವಾಗಿ ತ್ಯಾಜ್ಯನೀರನ್ನು ಬಿಡಲು ಉಪಯೋಗಿಸಬಹುದಾಗಿರುತ್ತದೆ.

**ಹೆಚ್ಚಿನ ಮಾಹಿತಿ**

ಕಲಂ: 15 BWSSB Act 1964 ರಂತೆ ರೊಚ್ಚು ನೀರನ್ನು ಸಂಸ್ಕರಣೆ ಮಾಡಿ ಸರಿಯಾದ ನೀರನ್ನು ಸಾರ್ವಜನಿಕರಿಗೆ ನೀಡುವ ಕರ್ತವ್ಯವು BWSSB ಸಂಸ್ಥೆಯ ವ್ಯಾಪ್ತಿಗೆ ಬರುತ್ತಿದ್ದು ಈ ಬಗ್ಗೆ ಮಂಡಳಿಯಿಂದಲೂ ಸಾಕಷ್ಟು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಅದರಂತೆ ಕಲಂ 63 ಹಾಗೂ 64 ರಂತೆ ರೊಚ್ಚು ನೀರು ಸಂಸ್ಕರಣಾ ಘಟಕಗಳ ಸ್ಥಾಪನೆ ಮಾಡುವ ಜವಾಬ್ದಾರಿಯು BWSSB ಸಂಸ್ಥೆಯ ಮುಖ್ಯ ಕರ್ತವ್ಯವಾಗಿರುತ್ತದೆ.

ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಕಲಂ 15ರ ಅನ್ವಯ ಸ್ಥಳೀಯ ಸಂಸ್ಥೆಗಳ (BBMP) ಘನತ್ಯಾಜ್ಯ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಹೊಂದಿದ್ದು ಹಾಗೂ ಕಟ್ಟಡ ತ್ಯಾಜ್ಯ ನಿರ್ವಹಣೆ ನಿಯಮಗಳಂತೆ ನಿರ್ವಹಣಾ ಜವಾಬ್ದಾರಿಯನ್ನು ಬಿಬಿಎಂಪಿ ಹೊಂದಿದ್ದು ಈ ಬಗ್ಗೆ ಮಂಡಳಿಯಿಂದ ಬಿಬಿಎಂಪಿಗೆ ನಿರ್ದೇಶನಗಳನ್ನು ಕಾಲಕಾಲಕ್ಕೆ ನೀಡಲಾಗಿರುತ್ತದೆ.

ಆದ್ದರಿಂದ ಗೌರವಾನ್ವಿತ ಲೋಕಾಯುಕ್ತರಲ್ಲಿ ಈ ಸಂಸ್ಥೆಗಳಾದ ಬಿಬಿಎಂಪಿ (BBMP) ಮತ್ತು ಬಿಡ್ಬ್ಲ್ಯೂಎಸ್ಎಸ್‌ಬಿಗಳಿಗೆ (BWSSB) ಕೆರೆಗೆ ರೊಚ್ಚುನೀರು ಸೇರುವುದನ್ನು ತಡೆಯುವ ಕುರಿತು ಹಾಗೂ ಘನ ತ್ಯಾಜ್ಯಗಳನ್ನು ಸೂಕ್ತ ನಿರ್ವಹಣೆ ಕುರಿತು ಕೆರೆ ಅಥವಾ ನದಿಗೆ ಸೇರದಂತೆ ಸೂಕ್ತ ನಿರ್ದೇಶನ ನೀಡುವ ಬಗ್ಗೆ ಮಂಡಳಿಯ ಪ್ರಾರ್ಥನೆ ಇರುತ್ತದೆ."

5. The matter is adjourned to 6th November 2019. All the authorities are directed to take effective steps to monitor the quality of the water in the lake and prevent any effluent substance dumping in to the lake and submit status report on the next date of hearing.

6. However, the liberty is also reserved to the complainant to give representation to all the authorities pointing out the steps that are required to be taken by each one of the authorities/respondents to rejuvenate/develop the lake. Such representation shall be given, if they so desire within six weeks from the date of communication of this letter.

7. Communicate this order to all the parties concerned.

**List this matter on 06-11-2019 at 03.00 p.m.**

**(Justice P.Vishwanatha Shetty)**
Lokayukta, State of Karnataka

3/7/2019

ck*